# ಮಾಧ್ಯಮಿಕ ಶಾಲಾ ಶಿಕ್ಷಾ ಪ್ರೋತ್ಸಾಹ ಕೇಂದ್ರ -1

- ನಿದೇಶ್ ಸೋನಿ

ಸ್ಥಳೀಯ ಸಮುದಾಯದ ಸಹಯೋಗದೊಂದಿಗೆ ಮಕ್ಕಳಿಗೆ ನವೀನ ರೀತಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಏಕಲವ್ಯ ಸಂಸ್ಥೆಯ ಪ್ರಯತ್ನವೇ *ಶಿಕ್ಷಾ ಪ್ರೋತ್ಸಾಹ ಕೇಂದ್ರ* (ಎಸ್‌ಪಿಕೆ). ಇದು ಮಕ್ಕಳು ತಮ್ಮದೇ ಆದ ವೇಗದಲ್ಲಿ ಕಲಿಯಬಹುದಾದ ಸ್ಥಳವಾಗಿದ್ದು, ಅವರ ಪೋಷಕರು ಯಾವುದೇ ಹಿಂಜರಿಕೆಯಿಲ್ಲದೆ ಬಂದು ಕೇಂದ್ರದ ನಿರ್ವಹಣೆ ಮತ್ತು ಕಾರ್ಯಾಚರಣೆಯಲ್ಲಿ ಮಧ್ಯಪ್ರವೇಶಿಸಬಹುದಾಗಿದೆ. ಅವರು ಕೇಂದ್ರದ ನಿರ್ವಾಹಕರನ್ನು ಅಥವಾ ಶಿಕ್ಷಕರನ್ನು (ಕೇಂದ್ರದಲ್ಲಿ ಮಕ್ಕಳಿಗೆ ಕಲಿಸುವವರು) ಭೇಟಿಯಾಗಿ ತಮ್ಮ ಮಕ್ಕಳ ಅಧ್ಯಯನದ ಬಗ್ಗೆ ಪ್ರಶ್ನೆಗಳನ್ನು ಕೇಳಬಹುದು. ಅಲ್ಲಿ ಕೋರ್ಸ್ ಅನ್ನು ಪೂರ್ಣಗೊಳಿಸಲು ಆತುರ ಬೇಕಿಲ್ಲ, ಅಥವಾ ಸ್ಪರ್ಧಾತ್ಮಕ ವಾತಾವರಣವೂ ಇಲ್ಲ. ಇಲ್ಲಿನ ಪ್ರತಿಯೊಂದು ಮಗುವೂ ತಮ್ಮ ಶಾಲಾಜೀವನದ ಒತ್ತಡದ ವೇಳಾಪಟ್ಟಿಯಲ್ಲಿ ಕಾಣೆಯಾಗಿದ್ದ ಮುಖ್ಯವಾಹಿನಿಯ ಶಿಕ್ಷಣದ ಸಾಮರ್ಥ್ಯಗಳನ್ನು ತಮ್ಮದೇ ಆದ ರೀತಿಯಲ್ಲಿ ಪಡೆಯಲು ಪ್ರಯತ್ನಿಸುತ್ತದೆ.

ಮಧ್ಯಪ್ರದೇಶದ ಕೆಲವು ಜಿಲ್ಲೆಗಳಲ್ಲಿ, *ಏಕಲವ್ಯ* ನಡೆಸುವ ಪ್ರಾಥಮಿಕ ಶಿಕ್ಷಾ ಕಾರ್ಯಕ್ರಮ (PRASHIKA), ಶಿಕ್ಷಣ ಜಗತ್ತಿನಲ್ಲಿ ಅಳಿಸಲಾಗದ ಛಾಪು ಮೂಡಿಸಿದೆ. ಈ ಕಾರ್ಯಕ್ರಮದ ಅನುಭವದಿಂದ ಹೊರಹೊಮ್ಮಿದ ಒಂದು ಪರಿಕಲ್ಪನೆಯು ಸಮುದಾಯದ ಸಹಭಾಗಿತ್ವವಿಲ್ಲದೆ ಶೈಕ್ಷಣಿಕ ವ್ಯವಸ್ಥೆಯನ್ನು ಬದಲಾಯಿಸುವ ಪ್ರಯತ್ನವು ಅಪೂರ್ಣ ಎಂದು ತೋರಿಸಿದೆ. ಸುಮಾರು ಇಪ್ಪತ್ತು ವರ್ಷಗಳಿಂದ ವಿವಿಧ ಪ್ರದೇಶಗಳ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಶಿಕ್ಷಾ ಪ್ರೋತ್ಸಾಹಕೇಂದ್ರದ ಮೂಲಕ ಏಕಲವ್ಯ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

**ಪ್ರಾಥಮಿಕ ಶಿಕ್ಷಾ ಪ್ರೋತ್ಸಾಹ ಕೇಂದ್ರ**

ಶಿಕ್ಷಾಪ್ರೋತ್ಸಾಹಕೇಂದ್ರವು ಯಾವುದಾದರೂಹಳ್ಳಿ ಅಥವಾ ನೆರೆಹೊರೆಯ ಪ್ರಾಥಮಿಕ ಶಾಲೆಯ ಬಳಿ ಶಾಲಾ ಸಮಯಕ್ಕೆ ಮೊದಲು ಅಥವಾ ಶಾಲಾ ಸಮಯದ ಅನಂತರ ಎರಡು ಗಂಟೆಗಳ ಕಾಲಸುಮಾರು ಮೂವತ್ತೈದು ಮಕ್ಕಳೊಂದಿಗೆ ಕಾರ್ಯನಿರ್ವಹಿಸುತ್ತದೆ. ನಾವು ಆದಷ್ಟು ಅಧ್ಯಯನ ಮಾಡಲು ಗರಿಷ್ಠ ಸಹಾಯದ ಅಗತ್ಯವಿರುವ ಮಕ್ಕಳನ್ನು ಆರಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಹೆಣ್ಣು ಮಕ್ಕಳು ಮತ್ತು ಅವಕಾಶವಂಚಿತ ಜಾತಿಗಳು ಅಥವಾ ಕುಟುಂಬಗಳ ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಸಾಮಾನ್ಯವಾಗಿ ಆಯಾ ಹಳ್ಳಿಯಿಂದಲೇ ಸ್ಥಳೀಯ ಕೇಂದ್ರದ ನಿರ್ವಾಹಕರನ್ನು ಸಮುದಾಯದ ಒಪ್ಪಿಗೆಯೊಂದಿಗೆ ಆಯ್ಕೆ ಮಾಡಲಾಗುತ್ತದೆ ಮತ್ತು ಅವರಿಗೆ ಶೈಕ್ಷಣಿಕ ತರಬೇತಿ ನೀಡಿ ಕೇಂದ್ರವನ್ನು ನಡೆಸುವ

ಜವಾಬ್ದಾರಿಯನ್ನು ನೀಡಲಾಗುತ್ತದೆ. ಏಕಲವ್ಯ ಮಕ್ಕಳು ಬಳಸಬಹುದಾದ ಸಾಮಗ್ರಿಗಳಿಗೆ ಹಣವನ್ನು ಮತ್ತು ಕೇಂದ್ರದ ನಿರ್ವಾಹಕರಿಗೆ ಗೌರವಧನವನ್ನು ಒದಗಿಸುತ್ತದೆ. ಕೆಲವೆಡೆ ಕೇಂದ್ರದ ನಿರ್ವಾಹಕರ ಗೌರವಧನ ಹಾಗೂ ಸಾಮಗ್ರಿ ವೆಚ್ಚದ ಒಂದು ಭಾಗವನ್ನು ಪಾಲಕರೇ ಹಂಚಿಕೊಂಡಿದ್ದಾರೆ. ಕೆಲವು ಸ್ಥಳೀಯರು ಮತ್ತು ಪೋಷಕರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗುತ್ತದೆ ಮತ್ತು ಮಾಸಿಕ ಸಭೆಗಳನ್ನು ನಡೆಸಲಾಗುತ್ತದೆ. ಸಭೆಯಲ್ಲಿ, ಕೇಂದ್ರದ ಕಾಳಜಿ, ನಿರ್ವಹಣೆ, ಮಕ್ಕಳ ಅಧ್ಯಯನ, ಕೇಂದ್ರದ ನಿರ್ವಹಣೆಯಲ್ಲಿ ಎದುರಿಸುತ್ತಿರುವ ತೊಂದರೆಗಳು ಮತ್ತು ಮಕ್ಕಳ ಹಾಜರಾತಿಯನ್ನು ಕುರಿತು ಚರ್ಚೆಗಳು ಮತ್ತು ವಿಮರ್ಶೆಗಳು ನಡೆಯುತ್ತವೆ.

ಪ್ರತಿ ಐದು ಅಥವಾ ಆರು ಕೇಂದ್ರಗಳಿಗೆ  ಅನುಸರಣಾ ಕಾರ್ಯ ನಿರ್ವಹಿಸಲು  ಒಬ್ಬ ಸಹವರ್ತಿ ಇದ್ದಾರೆ.ಅವರು ನಿಯಮಿತವಾಗಿ ಕೇಂದ್ರಗಳನ್ನು ಅವಲೋಕಿಸುತ್ತಿರುತ್ತಾರೆ. ಶೈಕ್ಷಣಿಕ ಬೆಂಬಲ ಮತ್ತು ಕೇಂದ್ರದ ನಿರ್ವಹಣೆಯ ಪ್ರತಿಯೊಂದು ವಿಷಯದಲ್ಲಿ ಕೇಂದ್ರದ ನಿರ್ವಾಹಕರಿಗೆ ಸಹಾಯ ಮಾಡುವುದು ಅವರ ಕೆಲಸವಾಗಿದೆ.
ಕೇಂದ್ರದ ನಿರ್ವಾಹಕರು ಮತ್ತು ಸಹವರ್ತಿಗಳಿಗೆ ನಿಯಮಿತ ಶೈಕ್ಷಣಿಕ ಬೆಂಬಲವನ್ನು ಒದಗಿಸಲು ಏಕಲವ್ಯ ಪ್ರತಿ ಹದಿನೈದು ದಿನಗಳು ಮತ್ತು ತಿಂಗಳಿಗೆ ಒಮ್ಮೆ ಸಭೆಗಳನ್ನು ಆಯೋಜಿಸುತ್ತದೆ.ಇದರಲ್ಲಿ ಶೈಕ್ಷಣಿಕ ಯೋಜನೆ ಮತ್ತು ಕೇಂದ್ರದ ಸಿದ್ಧತೆಗಳು ಮತ್ತು ಕೇಂದ್ರಕ್ಕೆ ಸಂಬಂಧಿಸಿದ ವ್ಯವಸ್ಥೆಗಳು/ಸಮಸ್ಯೆಗಳನ್ನು ಚರ್ಚಿಸಲಾಗುತ್ತದೆ. ಕೇಂದ್ರದ ನಿರ್ವಾಹಕರು, ಸಹವರ್ತಿಗಳು ಮತ್ತು ಪೋಷಕರ ಸಮಿತಿಯ ಸದಸ್ಯರು ಸಾಮರ್ಥ್ಯ ನಿರ್ಮಾಣಕ್ಕಾಗಿ ಇತರ ಕೇಂದ್ರಗಳು/ಸಂಸ್ಥೆಗಳಿಗೆ ಭೇಟಿ ನೀಡುತ್ತಾರೆ.ಇದರಿಂದ ಅವರು ಆ ಕೇಂದ್ರದಲ್ಲಿಆಗಿರುವ ಪ್ರಯತ್ನಗಳನ್ನು ತಿಳಿದುಕೊಳ್ಳಬಹುದು ಮತ್ತು ಅವುಗಳನ್ನು ತಮ್ಮ ಕೇಂದ್ರಗಳಲ್ಲಿ ಅಳವಡಿಸಿಕೊಳ್ಳಬಹುದು. ಇದಲ್ಲದೆ, ಕೇಂದ್ರದ ನಿರ್ವಾಹಕರು ಮತ್ತು ಸಹವರ್ತಿಗಳಿಗೆ ವರ್ಷಕ್ಕೆ ಎರಡು ಬಾರಿ ಒಂದು ವಾರದ ತರಬೇತಿಯನ್ನು ಏರ್ಪಡಿಸಲಾಗುತ್ತದೆ. ಮಕ್ಕಳು ಗಳಿಸಿಕೊಂಡಿರಬಹುದಾದ ಸಾಮರ್ಥ್ಯಗಳನ್ನು ನಿರ್ಣಯಿಸಲು ಮತ್ತು ದಾಖಲಿಸಲು ಎಲ್ಲ ಕೇಂದ್ರಗಳಲ್ಲಿ ನಿರಂತರ ಮೌಲ್ಯಮಾಪನ ಹಾಳೆಯನ್ನು ಇರಿಸಲಾಗಿರುತ್ತದೆ. ಮಕ್ಕಳನ್ನು ಒಂದು ಹಂತಕ್ಕೆ ತಯಾರು ಮಾಡಿದ ಅನಂತರ, ಅವರನ್ನು ಶಾಲೆಯ ಮುಖ್ಯವಾಹಿನಿಯ ಶಿಕ್ಷಣಕ್ಕೆ ಸೇರಿಕೊಳ್ಳಲು ಕಳುಹಿಸಲಾಗುತ್ತದೆ ಮತ್ತು ಅವರ ಜಾಗದಲ್ಲಿ ಆವಶ್ಯಕತೆ ಇರುವ ಇತರ ಮಕ್ಕಳು ಕೇಂದ್ರಕ್ಕೆ ಬರುತ್ತಾರೆ.

ಸಮಯ ಕಳೆದಂತೆ, ಶಿಕ್ಷಾ ಪ್ರೋತ್ಸಾಹ ಕೇಂದ್ರದ ಈ ರೂಪವು ಪ್ರಾಮುಖ್ಯವನ್ನು ಪಡೆದುಕೊಂಡಿದೆ. ಏಕಲವ್ಯದಲ್ಲಿ, ಈ ಕಾರ್ಯಕ್ರಮವು ಹಲವು ರೂಪಗಳಲ್ಲಿ ಮುಂದುವರಿದಿದೆಯಲ್ಲದೆ ಹೆಚ್ಚು ಮೆಚ್ಚುಗೆಗೆ ಸಹ ಪಾತ್ರವಾಗಿದೆ ಮತ್ತು ಇದನ್ನು ಹಲವಾರು ಕಡೆ ಮಾದರಿಯಾಗಿಯೂ ಸಹ ಬಳಸಲಾಗುತ್ತಿದೆ.ಏಕಲವ್ಯ ಇಂತಹ ಸಂಸ್ಥೆಗಳೊಂದಿಗೆ ಜೊತೆಗೂಡಿ ಶಿಕ್ಷಾ ಪ್ರೋತ್ಸಾಹ ಕೇಂದ್ರದ ಮಾದರಿಯನ್ನು ಸ್ಥಾಪಿಸುವ ಮತ್ತು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ತರಬೇತಿ ಮತ್ತು ಬೋಧನಾ ಸಾಧನಗಳ ನೆರವು ನೀಡುತ್ತದೆ. ಈ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖ ಕಾರಣಗಳಲ್ಲಿ ಒಂದು, ಸಮುದಾಯದ ಒಳಗೊಳ್ಳುವಿಕೆ.

**ಮಾಧ್ಯಮಿಕ ಶಾಲಾ ಶಿಕ್ಷಾ ಪ್ರೋತ್ಸಾಹ ಕೇಂದ್ರ (MS-SPK)**

2016 ರಲ್ಲಿ ಮುಂಬೈನ ಜಮ್ಶೆಡ್ಜಿ ಟಾಟಾ ಟ್ರಸ್ಟ್‌ನ ಆರ್ಥಿಕ ಬೆಂಬಲದೊಂದಿಗೆ ಮಧ್ಯಪ್ರದೇಶದ ಬೇತುಲ್ ಜಿಲ್ಲೆಯ ಶಹಪುರ್ ವಿಕಾಸಖಂಡದ ಹನ್ನೆರಡು ಹಳ್ಳಿಗಳಲ್ಲಿ ಏಕಲವ್ಯ ಈ ಪ್ರಯೋಗವನ್ನು ಪ್ರಾರಂಭಿಸಿತು. ಹೆಸರೇ ಸೂಚಿಸುವಂತೆ, ಈ ಕಾರ್ಯಕ್ರಮದಡಿ6 ರಿಂದ 8 ನೇ ತರಗತಿಯವರೆಗಿನ ಮಕ್ಕಳಿಗೆ ಕಲಿಸಲು ಪ್ರಯತ್ನಿಸಲಾಗಿದೆ. ಮಾಧ್ಯಮಿಕ ಶಾಲೆಗಳ ಮಕ್ಕಳಿಗೆ ಸಹಾಯ ಮಾಡಲು ಅನುಸರಿಸುವ ಕಾರ್ಯವಿಧಾನವು ಪ್ರಾಥಮಿಕ ಶಿಕ್ಷಾ ಪ್ರೋತ್ಸಾಹ ಕೇಂದ್ರಕ್ಕಿಂತ ಭಿನ್ನವಾಗಿದೆ. ಏಕೆಂದರೆ ಈ ವಯಸ್ಸಿನ ಮತ್ತು ವರ್ಗದ ಅಗತ್ಯತೆಗಳು ವಿಭಿನ್ನವಾಗಿರುತ್ತವೆ. ಇಲ್ಲಿ ಈ ಪ್ರಯೋಗವನ್ನು ವಿಭಿನ್ನವಾಗಿಸುವ ಅಂಶಗಳು ಹಾಗೂಈ ಬದಲಾವಣೆಗಳ ಆಧಾರದ ಬಗ್ಗೆ ನಾವು ಚರ್ಚಿಸುತ್ತೇವೆ.

**ಕೇಂದ್ರದ ನಿರ್ವಾಹಕರು**

ಕೇಂದ್ರದ ನಿರ್ವಾಹಕರು ಮಕ್ಕಳೊಂದಿಗೆ ಗರಿಷ್ಠ ಒಡನಾಟವನ್ನು ಹೊಂದಿರುವ ಸ್ನೇಹಿತನಾಗಿಯೂ ಮತ್ತು ಪ್ರತಿದಿನ ಮಕ್ಕಳೊಂದಿಗೆ ಇರುವ ಸಂಯೋಜಕನಾಗಿಯೂ ಪಾತ್ರ ವಹಿಸುತ್ತಾರೆ. ಪ್ರಾಥಮಿಕ ಶಿಕ್ಷಾ ಪ್ರೋತ್ಸಾಹ ಕೇಂದ್ರದ ನಿರ್ವಾಹಕರಾಗಿ ಗ್ರಾಮದ ಸ್ಥಳೀಯರನ್ನು ಆಯ್ಕೆ ಮಾಡಲಾಗುತ್ತದೆ. 6 ರಿಂದ 8 ನೇ ತರಗತಿಯ ಮಕ್ಕಳು ಗಣಿತ, ಭಾಷೆ, ವಿಜ್ಞಾನ ಮತ್ತು ಸಮಾಜ ವಿಜ್ಞಾನದಂತಹ ವಿಷಯಗಳನ್ನು ಅಧ್ಯಯನ ಮಾಡಬೇಕಾಗಿರುವುದರಿಂದ ಕೇಂದ್ರದ ನಿರ್ವಾಹಕರು ಈ ವಿಷಯಗಳ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳಿವಳಿಕೆಯನ್ನು ಹೊಂದಿರಬೇಕು ಮತ್ತು ಕಲಿಯಲು ಸಿದ್ಧರಾಗಿರಬೇಕು. ಬಹುತೇಕ ಮಾಧ್ಯಮಿಕ ಶಾಲಾ ಶಿಕ್ಷಾ ಪ್ರೋತ್ಸಾಹ ಕೇಂದ್ರಗಳನ್ನು ದೂರದ ಹಳ್ಳಿಗಳಲ್ಲಿ

ತೆರೆಯಲಾಗುತ್ತಿದ್ದರಿಂದ ಹಳ್ಳಿಗಳಲ್ಲಿ ಸೂಕ್ತ ಕೇಂದ್ರ ನಿರ್ವಾಹಕರು ದೊರೆಯುವುದು ತುಂಬ ಕಷ್ಟಕರವಾಗಿತ್ತು. ಶಿಕ್ಷಾ ಪ್ರೋತ್ಸಾಹ ಕೇಂದ್ರದಮಾದರಿಯ ಅನುಸಾರ ಕೇಂದ್ರದ ನಿರ್ವಾಹಕರನ್ನು ಆಯಾ ಸಮುದಾಯದ ಅಭಿಪ್ರಾಯದೊಂದಿಗೆ ಆಯ್ಕೆ ಮಾಡಲಾಗುತ್ತದೆಯಾದರೂ, ಅಭ್ಯರ್ಥಿಗಳನ್ನು ನಾವು ಹತ್ತಿರದ ಹಳ್ಳಿಗಳಲ್ಲಿ ಹುಡುಕಲು ಪ್ರಯತ್ನಿಸುತ್ತೇವೆ ಮತ್ತು ಇಬ್ಬರು ಅಥವಾ ಮೂರು ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ಅನಂತರ ಅವರ ಹೆಸರನ್ನು ಪೋಷಕರ ಸಭೆಯಲ್ಲಿ ಸೂಚಿಸಿ, ಅವರಲ್ಲಿ ಒಬ್ಬರನ್ನು ಅಂತಿಮವಾಗಿ ಆರಿಸಲಾಗುತ್ತದೆ. ಸ್ಥಳೀಯ ನಿರ್ವಾಹಕರನ್ನು ಹುಡುಕುವ ಸಮಸ್ಯೆಯನ್ನು ನಾವು ಸಮುದಾಯದ ಮುಂದೆ ವಿವರಿಸಿದಾಗ, ಅವರು ನಮ್ಮೊಂದಿಗೆ ಒಮ್ಮತಕ್ಕೆ ಬಂದರು ಮತ್ತು ನಾವು ಈ ರೀತಿಯಲ್ಲಿ ಕೇಂದ್ರ ನಿರ್ವಾಹಕರನ್ನು ನೇಮಿಸಿದೆವು.

**ಗುಂಪುಗಳರಚನೆ**

ಪ್ರಾಥಮಿಕ ಶಿಕ್ಷಾ ಪ್ರೋತ್ಸಾಹ ಕೇಂದ್ರಕ್ಕೆ ಮಕ್ಕಳನ್ನು ಪರಿಚಯಿಸುವ ಮೊದಲು, ಎಲ್ಲ ಮಕ್ಕಳಿಗೆ ಗಣಿತ ಮತ್ತು ಭಾಷೆಯಲ್ಲಿ ಮೂಲಭೂತ ಪರೀಕ್ಷೆಯನ್ನು ನಡೆಸಲಾಗುತ್ತದೆ. ಫಲಿತಾಂಶಗಳನ್ನು ವಿಶ್ಲೇಷಿಸಿದ ಅನಂತರ, ತರಗತಿಗೆ ಒಟ್ಟು 35 ಮಕ್ಕಳನ್ನು ಸೇರಿಸಿಕೊಳ್ಳಲಾಗುತ್ತದೆ ಮತ್ತು ಅನಂತರ ಮಕ್ಕಳ ಸಾಮರ್ಥ್ಯದ ಆಧಾರದ ಮೇಲೆ ಅವರನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಅತ್ಯುನ್ನತ ಪ್ರದರ್ಶನವನ್ನು ನೀಡಿದವರನ್ನು ಎ ಗುಂಪಿಗೆ, ಮಧ್ಯಮ ಪ್ರದರ್ಶನವನ್ನು ನೀಡಿದವರನ್ನು ಬಿ ಗುಂಪಿಗೆ, ಮತ್ತು ಕಡಮೆ ಕಾರ್ಯಕ್ಷಮತೆ ತೋರಿದ ವಿದ್ಯಾರ್ಥಿಗಳನ್ನುಸಿ ಗುಂಪಿಗೆ ಸೇರಿಸಲಾಗುತ್ತದೆ. ಮಕ್ಕಳನ್ನು ಕಾಲಕಾಲಕ್ಕೆ ಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಅವರು ಗಳಿಸಿದ ಸಾಮರ್ಥ್ಯಗಳನ್ನು ನಿರಂತರ ಮೌಲ್ಯಮಾಪನದ ಹಾಳೆಯಲ್ಲಿ ನಮೂದಿಸಲಾಗುತ್ತದೆ ಮತ್ತು ಅದರ ಆಧಾರದ ಮೇಲೆ ಮಕ್ಕಳು ಸಿ ಗುಂಪಿನಿಂದ ಬಿ ಮತ್ತು ಅನಂತರ ಎ ಗುಂಪಿಗೆ ಹೋಗುತ್ತಾರೆ.

ಈ ರೀತಿಯಾದ ವಿದ್ಯಾರ್ಥಿಗಳ ಗುಂಪು ಮಾಡುವಿಕೆಯು ಮಕ್ಕಳ ಸಾಮರ್ಥ್ಯವನ್ನು ಆಧರಿಸಿದೆಯೇ ಹೊರತು ಅವರ ವರ್ಗ ಅಥವಾ ವಯಸ್ಸಿನ ಮೇಲೆ ಅಲ್ಲ. ಮಾಧ್ಯಮಿಕ ಶಾಲಾ ಶಿಕ್ಷಾ ಪ್ರೋತ್ಸಾಹ ಕೇಂದ್ರದ ತಂಡದಲ್ಲಿರುವ ನಮ್ಮ ಸಹೋದ್ಯೋಗಿಗಳು ಮಕ್ಕಳನ್ನು ಈ ರೀತಿಯಾಗಿ ಹಣೆಪಟ್ಟಿ ಮಾಡುವುದು ಸೂಕ್ತವಲ್ಲ ಎಂಬ ಅಭಿಪ್ರಾಯಕ್ಕೆ ಬಂದರು. ಗುಂಪುಗಳಿಗೆ ಯಾವುದೇ ಹೆಸರನ್ನು ನೀಡಿದ್ದರೂ ಸಹ, ಸ್ವಲ್ಪ ಸಮಯದ ಅನಂತರ ಮಕ್ಕಳು ತಾವು ಇರುವ ಗುಂಪು ತಂತಮ್ಮ ಸಾಮರ್ಥ್ಯದ ಮೇಲೆ ಆಧಾರಿತವಾಗಿದೆ ಎಂದು ತಿಳಿದುಕೊಳ್ಳುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳನ್ನು ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತ್ಯೇಕಿಸಿದರೆ, ಕಾರ್ಯಕ್ಷಮತೆ ತೃಪ್ತಿಕರವಾಗಿಲ್ಲದ ವಿದ್ಯಾರ್ಥಿಗಳ ಆತ್ಮವಿಶ್ವಾಸದ ಮೇಲೆ

ನಕಾರಾತ್ಮಕ ಪರಿಣಾಮ ಬೀರುತ್ತದೆ. ಅದರಲ್ಲೂ 3, 4 ಅಥವಾ 5 ನೇ ತರಗತಿಯ ಮಗುವನ್ನು ಈ ರೀತಿ ಸಿ ಗುಂಪಿಗೆ ಸೇರಿಸಿದಾಗ ಅವರು ಕೀಳರಿಮೆ ಮತ್ತು ಆತ್ಮವಿಶ್ವಾಸದ ಕೊರತೆಯನ್ನು ಅನುಭವಿಸುತ್ತಾರೆ. ಇಲ್ಲಿ ತರಗತಿಯ ಬೋಧನೆಯ ಸಂದರ್ಭದಲ್ಲಿ ನಿರ್ವಾಹಕರು ವಿದ್ಯಾರ್ಥಿಗಳ ಸಾಮರ್ಥ್ಯದ ಆಧಾರದ ಮೇಲೆ ಸಿ ಗುಂಪಿಗೆ ಸೇರಿಸಿರುತ್ತಾರೆ ಮತ್ತು ಈ ವಿಂಗಡಣೆಯಲ್ಲಿ ಬದಲಾವಣೆಯನ್ನೂ ತರಬಹುದಾಗಿದೆ.

ತಮ್ಮ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಲು ಮತ್ತು ತರಗತಿಯಲ್ಲಿ ಮಕ್ಕಳಿಗೆ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಅನುವು ಮಾಡಿಕೊಡಲು ಕೇಂದ್ರದ ನಿರ್ವಾಹಕರ ಸಾಮರ್ಥ್ಯವನ್ನು ನಿರ್ಮಿಸಲು ನಿರಂತರವಾಗಿ ಪ್ರಯತ್ನಿಸುವುದು ನಮ್ಮ ದೀರ್ಘಾವಧಿಯ ಗುರಿಗಳಲ್ಲಿ ಒಂದಾಗಿದೆ.

**ವಿಷಯಗಳ ಬಗೆಗಿನ ನಮ್ಮ ಚಿಂತನೆ**

**ಗಣಿತಶಾಸ್ತ್ರ**

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ 2005ರ ಪ್ರಕಾರ, 'ಎಲ್ಲ ಮಕ್ಕಳು ಗಣಿತವನ್ನು ಕಲಿಯಬಹುದು, ಮತ್ತು ಎಲ್ಲ ಮಕ್ಕಳು ಗಣಿತವನ್ನು ಕಲಿಯಬೇಕು.' ನಾವು ಈ ಪ್ರಮೇಯವನ್ನು ಆಧಾರವಾಗಿಟ್ಟುಕೊಂಡು ಕೆಲಸ ಮಾಡುತ್ತೇವೆ. ಗಣಿತವು ಮಕ್ಕಳಿಗೆ ಕೇವಲ ಒಂದು ವಿಷಯವಾಗಬಾರದು. ಅವರು ಗಣಿತವನ್ನು ವಿವೇಚನೆಯನ್ನು ಬೆಳೆಸಿಕೊಳ್ಳಲು ಮತ್ತು ಅವರ ದೈನಂದಿನ ಜೀವನದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬಳಸಬೇಕು ಮತ್ತು ಹಾಗೆ ಮಾಡಲು ಗಣಿತದ ವಿಧಾನಗಳನ್ನು ಬಳಸಬೇಕು. ಈ ಕೌಶಲ್ಯಗಳನ್ನು ಸಾಧಿಸಲು, ಮಕ್ಕಳು ಸಂಖ್ಯಾ ಪ್ರಜ್ಞೆಯನ್ನು ಹೊಂದಿರುವುದು ಅತ್ಯಗತ್ಯವಾಗಿದೆ (ಇದು ಸಂಖ್ಯೆಗಳು ಮತ್ತು ಇತರ ಕಾರ್ಯಾಚರಣೆಗಳ ತಿಳಿವಳಿಕೆಯನ್ನು ಒಳಗೊಂಡಿರುತ್ತದೆ). ನಾವು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ. ಭಿನ್ನರಾಶಿಗಳು, ಶೇಕಡಾವಾರು, ದಶಮಾಂಶ, ಋಣಾತ್ಮಕ ಸಂಖ್ಯೆಗಳು, ಮಾಪನ, ಸೂಚ್ಯಂಕಗಳು ಮುಂತಾದ ಕೆಲವು ಪರಿಕಲ್ಪನೆಗಳನ್ನು ಸಹ ನಾವು ಆಯ್ಕೆ ಮಾಡಿದ್ದೇವೆ.

ಈ ಗಣಿತದ ಪರಿಕಲ್ಪನೆಗಳನ್ನು ಕುರಿತು ನಮ್ಮ ಕೆಲಸವನ್ನು ಪ್ರಾರಂಭಿಸುವ ಮೊದಲು, ನಾವು ಮಕ್ಕಳಿಗಾಗಿ ಬೇಸ್‌ಲೈನ್ ಪರೀಕ್ಷೆಯನ್ನು ನಡೆಸಿ ನಾವು ಮಕ್ಕಳೊಂದಿಗೆ ಯಾವ ಕ್ಷೇತ್ರದಲ್ಲಿ ಗರಿಷ್ಠ ಕೆಲಸವನ್ನು ಮಾಡಬೇಕಾಗುತ್ತದೆ ಎಂಬುದನ್ನು ಗುರುತಿಸಿದ್ದೇವೆ. ಈ ಸಾಮರ್ಥ್ಯಗಳಿಲ್ಲದೆ ಇತರ ಗಣಿತದ ಸಾಮರ್ಥ್ಯಗಳ ಮೇಲೆ ಕೆಲಸ ಮಾಡಲು ಸಾಧ್ಯವೇ ಇರಲಿಲ್ಲ. ನನ್ನ ದೃಷ್ಟಿಯಲ್ಲಿ, ಗಣಿತಕ್ಕೆ ಶ್ರೇಣೀಕೃತ ಸ್ವಭಾವವಿರುವುದರಿಂದ ನಾವು ಅದರಲ್ಲಿ ಜ್ಞಾನವನ್ನು ಪಡೆಯಲು ಒಂದು ಕ್ರಮವನ್ನು ಪಾಲಿಸಬೇಕಾಗುತ್ತದೆ.

**ಭಾಷೆ**

ಭಾಷೆಯು ಪಠ್ಯಕ್ರಮದಿಂದಾಚೆ ಓದುವಿಕೆ, ಬರವಣಿಗೆ ಮತ್ತು ಅಭಿವ್ಯಕ್ತಿಯ ಮೇಲೆ ಕೇಂದ್ರೀಕರಿಸುವುದರಿಂದ ಅದು ಎಲ್ಲ ವಿಷಯಗಳಿಗೂ ಆಧಾರವಾಗಿದೆ. ಓದುವುದು ಎಂದರೆ ಅರ್ಥಮಾಡಿಕೊಳ್ಳುತ್ತಾ ಓದುವುದು. ನಾವು ಆರಂಭದಲ್ಲಿ ಬರವಣಿಗೆ ಕೌಶಲ್ಯಕ್ಕೆ ಆದ್ಯತೆ ನೀಡುವುದಿಲ್ಲ, ಓದುವಿಕೆ ಮತ್ತು ಅಭಿವ್ಯಕ್ತಿಗೆ ಹೆಚ್ಚಿನ ಗಮನ ನೀಡಲಾಗುತ್ತದೆ. ಬರವಣಿಗೆ ಕೂಡ ಅಭಿವ್ಯಕ್ತಿಯ ಮಾಧ್ಯಮವಾಗಿದ್ದರೂ ನಾವು ಮೌಖಿಕ ಅಭಿವ್ಯಕ್ತಿಗೆ ಹೆಚ್ಚು ಗಮನ ಕೊಡುತ್ತೇವೆ. ಆ ಕಾರಣದಿಂದ, ಮಕ್ಕಳ ಗ್ರಂಥಾಲಯ ಮತ್ತು ಅದರಲ್ಲಿನ ಪುಸ್ತಕಗಳೇ ನಮ್ಮ ದೊಡ್ಡ ಸಂಪನ್ಮೂಲಗಳಾಗಿವೆ. ನಾವು ಭಾಷಾ ಬೋಧನೆಯಲ್ಲಿ ಪುಸ್ತಕಗಳನ್ನು ಓದುವ ಮೂಲಕ ಮತ್ತುವಿವಿಧ ರೀತಿಯ ಚಟುವಟಿಕೆಗಳನ್ನು ಮಾಡುವ ಮೂಲಕ ಕೆಲಸ ಮಾಡುತ್ತೇವೆ. ಸ್ವತಂತ್ರ ಓದುವಿಕೆ, ಗುಂಪು ಓದುವಿಕೆ, ಕಥೆ ಹೇಳುವುದು, ನಾವು ಓದಿದ ಕಥೆಗಳ ಆಧಾರದ ಮೇಲೆ ನಾಟಕಗಳನ್ನು ರಚಿಸುವುದು, ದೈನಂದಿನ ದಿನಚರಿ ಬರೆಯುವುದು, ಸುದ್ದಿ ಸಂಗ್ರಹಿಸುವುದು, *ಬಾಲಅಕ್ಬಾರ್*-ಮಕ್ಕಳ ಪತ್ರಿಕೆ ರಚಿಸುವುದು, ಪರಸ್ಪರ ಪತ್ರಗಳನ್ನು ಬರೆಯುವುದು ಮತ್ತು ಕವಿತೆಗಳನ್ನು ಹಾಡುವುದು, ಮುಂತಾದ ವಿವಿಧ ರೀತಿಯ ಚಟುವಟಿಕೆಗಳನ್ನು ಕೈಗೊಳ್ಳುತ್ತೇವೆ.ಸಾಂಪ್ರದಾಯಿಕವಾಗಿಅಕ್ಷರಗಳು ಅಥವಾ ಪದಗಳನ್ನು ಕಲಿಸುವ ವಿಧಾನಕ್ಕಿಂತ ಹೆಚ್ಚಾಗಿ ಭಾಷೆಯ ಸಂದರ್ಭ ಆಧಾರಿತ ಬೋಧನೆಯಲ್ಲಿ ನಮಗೆ ಹೆಚ್ಚಿನ ವಿಶ್ವಾಸವಿದೆ.

**ವಿಜ್ಞಾನ**

ಮಕ್ಕಳಿಗೆ ಕೇವಲ ನಿರ್ಣಯಗಳನ್ನು ನೀಡಿ ಅವುಗಳನ್ನು ನೆನಪಿಟ್ಟುಕೊಳ್ಳುವಂತೆ ಹೇಳಬಾರದು.ಬದಲಿಗೆ ಅವರು ತಾವು ಏನನ್ನು ಅರ್ಥಮಾಡಿಕೊಂಡಿದ್ದಾರೆಯೋ ಅದನ್ನು ಹಂಚಿಕೊಳ್ಳಲು, ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು, ಪ್ರಯೋಗ ಮಾಡಲು, ತನಿಖೆ ಮಾಡಲು ಮತ್ತು ಸ್ವತಃ ನಿರ್ಣಯಕ್ಕೆ ಬರಲು ಪ್ರೋತ್ಸಾಹಿಸಬೇಕು. ಏಕಲವ್ಯವು "ಹೊಶಂಗಾಬಾದ್ ವಿಜ್ಞಾನ ಬೋಧನಾ ಕಾರ್ಯಕ್ರಮ"ವನ್ನು ಅಭಿವೃದ್ಧಿಪಡಿಸಿದೆ. ಇದು ವಿಜ್ಞಾನ ಬೋಧನೆಯ ನವೀನ ಮಾದರಿಯಾಗಿದೆ. ಜೊತೆಗೆ 6 ರಿಂದ 8 ನೇ ತರಗತಿಗಳಿಗೆ *ಬಾಲವೈಜ್ಞಾನಿಕ್* ಎಂಬ ಮೂರು ಪಠ್ಯಪುಸ್ತಕಗಳನ್ನು ಸಹರಚಿಸಿದೆ. ಮಾಧ್ಯಮಿಕ ಶಾಲಾ ಶಿಕ್ಷಾ ಪ್ರೋತ್ಸಾಹ ಕೇಂದ್ರದಕಾರ್ಯಕ್ರಮದಡಿಯಲ್ಲಿನ ನಮ್ಮ ಕೆಲಸವು ಈ ಪುಸ್ತಕಗಳನ್ನು ಆಧರಿಸಿದೆ.

**ಸಮಾಜವಿಜ್ಞಾನ**

ನಾವು ಸ್ಥಳೀಯ ಸಂದರ್ಭ ಮತ್ತು ಪರಿಸರದಿಂದ ಸಣ್ಣ ಯೋಜನೆಗಳಾದ ಟೆಂಡು ಎಲೆಗಳ ಸಂಗ್ರಹಣೆ ಮತ್ತು ಶೇಖರಣೆ, ಇಟ್ಟಿಗೆ ತಯಾರಿಕೆ ಪ್ರಕ್ರಿಯೆ, ಗ್ರಾಮದಲ್ಲಿ ನೀರಿನ

ಸಂಪನ್ಮೂಲಗಳ ಸಮೀಕ್ಷೆ ಇತ್ಯಾದಿಗಳನ್ನು ಆರಿಸಿಕೊಳ್ಳುತ್ತೇವೆ. ಈ ಯೋಜನೆಗಳ ಮೂಲಕ ನಾವು ಮಕ್ಕಳಿಗೆ ಅರ್ಥಮಾಡಿಕೊಳ್ಳುವ, ವಿಶ್ಲೇಷಿಸುವ ಮತ್ತು ಹೋಲಿಸುವ ವಿಷಯದಲ್ಲಿ ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಅವಕಾಶಗಳನ್ನು ನೀಡುತ್ತೇವೆ. ಇಂತಹ ಸಣ್ಣ ಯೋಜನೆಗಳು ಮಕ್ಕಳು ತಮ್ಮ ಸುತ್ತಮುತ್ತಲಿನ ಆಗು ಹೋಗುಗಳ ಬಗ್ಗೆ, ಅವುಗಳೊಂದಿಗೆ ಹೊಂದಿರುವ ಸಂಪರ್ಕ ಮತ್ತು ಅವು ಹೇಗೆ ಪರಿಣಾಮ ಬೀರುತ್ತವೆ ಎಂದು ವಿಶ್ಲೇಷಿಸಲು ಮತ್ತು ಕಲಿಯಲು ಸಹಾಯ ಮಾಡುತ್ತವೆ.ಇದಲ್ಲದೆ, ಅವರು ಅದರ ಬಗ್ಗೆ ಉತ್ತಮ ರೀತಿಯಲ್ಲಿ ಯೋಚಿಸಬಹುದು, ಅರ್ಥಮಾಡಿಕೊಳ್ಳಬಹುದು, ಚರ್ಚಿಸಬಹುದು ಮತ್ತು ಮಾತನಾಡಬಹುದು. ತರಗತಿಯ ಹೊರಗೆ ಮಕ್ಕಳೊಂದಿಗೆ ಮಾಡಿದ ಪ್ರಯೋಗಗಳು ಅವರ ತಿಳಿವಳಿಕೆಯನ್ನು ಹೆಚ್ಚಿಸುವಲ್ಲಿ ಅಪಾರ ಕೊಡುಗೆ ನೀಡಿವೆ.

**ಸಾಮಾಜಿಕ ವಿಷಯಗಳನ್ನು ಕುರಿತ ಚರ್ಚೆಗಳು**

ನಾವು ಮಾಸಿಕ ಸಭೆಗಳನ್ನು ಆಯೋಜಿಸಿಕೊಂಡು ಆ ರೂಪದಲ್ಲಿ ಒಂದು ಹೊಸ ಅಭ್ಯಾಸವನ್ನು ಪ್ರಾರಂಭಿಸಿದ್ದೇವೆ.ಇದರಲ್ಲಿ **ಮಾಧ್ಯಮಿಕ ಶಾಲಾ ಶಿಕ್ಷಾ ಪ್ರೋತ್ಸಾಹ** ಕೇಂದ್ರದ ತಂಡದಲ್ಲಿ ಕೆಲಸ ಮಾಡುವ ಸಹೋದ್ಯೋಗಿಗಳು ಪ್ರತಿ ತಿಂಗಳ ಕೊನೆಯ ಭಾನುವಾರದಂದು ಒಟ್ಟಿಗೆ ಕುಳಿತು ವೃತ್ತಪತ್ರಿಕೆಯಲ್ಲಿನ ನಿರ್ದಿಷ್ಟ ವಿಷಯವನ್ನು ಕುರಿತ ಲೇಖನವನ್ನು ಓದುತ್ತೇವೆ ಅಥವಾ ಚಲನಚಿತ್ರವನ್ನು ವೀಕ್ಷಿಸಿ ಅನಂತರ ಚರ್ಚಿಸುತ್ತೇವೆ. ನಾವು ಲಿಂಗ, ಜನಾಂಗ, ಶೋಷಣೆ, ತಾರತಮ್ಯ, ಸಮಾನತೆ, ಮೀಸಲಾತಿ ಮತ್ತು ನಮ್ಮ ಸುತ್ತ ನಡೆಯುತ್ತಿರುವ ಸಂಗತಿಗಳ ಬಗ್ಗೆ ಮಾತನಾಡುತ್ತೇವೆ. ಈ ಚರ್ಚೆಗಳು ನಮ್ಮ ಸದಸ್ಯರಲ್ಲಿ ಸಕಾರಾತ್ಮಕ ಚಿಂತನೆಯನ್ನು ಬೆಳೆಸಲು ಸಹಾಯ ಮಾಡಿದೆ. ಸ್ವಲ್ಪ ಸಮಯದ ಅನಂತರ, ತಂಡದ ಸದಸ್ಯರು ಈ ಸಮಸ್ಯೆಗಳ ಬಗ್ಗೆ ಪೋಷಕರ ಸಭೆಗಳಲ್ಲಿ ಮಾತನಾಡಿಕೆಲವು ಬದಲಾವಣೆಗಳನ್ನು ಕಾರ್ಯಗತಗೊಳಿಸುವಲ್ಲಿ ಸಮರ್ಥರಾಗಿದ್ದಾರೆ. ಮುಟ್ಟಿನ ಸಮಯದಲ್ಲಿ ಮಹಿಳೆಯರು ಭಾಗವಹಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆಪೋಷಕರ ಸಭೆಗಳನ್ನು ಯಾವುದೇ ಧಾರ್ಮಿಕ ಸ್ಥಳದಲ್ಲಿ ನಡೆಸಲಾಗುತ್ತಿರಲಿಲ್ಲ. ಮುಟ್ಟು ಒಂದು ದೈಹಿಕ ಕ್ರಿಯೆಯೇ ಹೊರತು 'ಶಾಪ' ಅಲ್ಲ ಎಂಬ ಅರಿವು ಮೂಡಿಸಲು ಸ್ವಲ್ಪ ಮಟ್ಟಿಗೆ ನಾವು ಸಮರ್ಥರಾಗಿದ್ದೇವೆ ಮತ್ತು ಈಗ ಕನಿಷ್ಠಪಕ್ಷ ತಂಡದ ಕೆಲವು ಸದಸ್ಯರು ಅದಕ್ಕೆ ಸಂಬಂಧಿಸಿದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳಲು ಸಮರ್ಥರಾಗಿದ್ದಾರೆ ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನಗಳು ಇಂದಿಗೂ ನಡೆಯುತ್ತಿವೆ. ಆಹಾರ, ಜಾತಿ, ಬಣ್ಣ, ದೈಹಿಕ ನ್ಯೂನತೆ ಅಥವಾ ಧರ್ಮದ ಆಧಾರದ ಮೇಲೆ

ಯಾರೂ ತಾರತಮ್ಯ ಮಾಡಬಾರದು ಎಂಬ ಅಂಶವನ್ನು ನಾವು ಚರ್ಚಿಸಲು ಸಹ ಸಾಧ್ಯವಾಗಿದೆ. ಯೂಟ್ಯೂಬ್‌ನಲ್ಲಿ ಲಭ್ಯವಿರುವ *ಲಡ್ಡು*ವಿನಂತಹ ಕೆಲವು ಕಿರು ಸಾಕ್ಷ್ಯಚಿತ್ರಗಳು ಈ ನಿಟ್ಟಿನಲ್ಲಿ ಬಹಳ ಸಹಾಯಕವಾಗಿವೆ. ನಾವು ಮಕ್ಕಳೊಂದಿಗೆ ಉತ್ತಮ ಸ್ಪರ್ಶ-ಕೆಟ್ಟ ಸ್ಪರ್ಶ, ಪರಸ್ಪರರ ಆಹಾರ, ಜೀವನಶೈಲಿ ಮತ್ತು ಜಾತಿಯ ಆಧಾರದ ಮೇಲೆ ತಾರತಮ್ಯದಂತಹ ಅನೇಕ ಪ್ರಮುಖ ವಿಷಯಗಳ ಬಗ್ಗೆ ಮಾತನಾಡಿದ್ದೇವೆ.
ಈ ಪ್ರಯತ್ನಗಳಿಗೆ ಸಾಕಷ್ಟು ತಯಾರಿ ಮತ್ತು ಸಮಯ ಬೇಕಾಗುತ್ತದೆ ಮತ್ತು ನಾವು ನಮ್ಮ ಕೈಲಾದಷ್ಟು ಪ್ರಯತ್ನಿಸಿದ್ದೇವೆ. ಈ ವಿಷಯಗಳಲ್ಲಿ ನಾವು ಸ್ಥಳೀಯ ಯುವಕರನ್ನು ಈ ಸಭೆಗಳಿಗೆ ನಿಯಮಿತವಾಗಿ ಆಹ್ವಾನಿಸುತ್ತೇವೆ. ಏಕೆಂದರೆ ಅವರು ಈ ವಿಷಯದಲ್ಲಿ ಜನರಿಗೆ ಶಿಕ್ಷಣ ನೀಡುವಲ್ಲಿ ಕಾಳಜಿ ಹೊಂದಿದ್ದಾರೆ ಮತ್ತು ಈ ಪ್ರಯತ್ನಗಳೊಂದಿಗೆ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದ್ದಾರೆ. ಇನ್ನು ಎರಡು ಮೂರು ವರ್ಷಗಳಲ್ಲಿ, ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲು ನಮಗೆ ವಿವಿಧ ರೀತಿಯಲ್ಲಿ ಸಹಾಯ ಮಾಡುವ ಸುಮಾರು ಐವತ್ತು ಯುವಕರನ್ನು ನಾವು ಸಿದ್ಧಪಡಿಸಲು ಸಾಧ್ಯವಾಗಿದೆ.

**ಮಾಧ್ಯಮಿಕಶಾಲಾಶಿಕ್ಷಾಪ್ರೋತ್ಸಾಹಕೇಂದ್ರವು**ಯಾವುದೇ ರೀತಿಯಲ್ಲಿಯೂ ಸರ್ಕಾರಿ ಶಾಲೆಗಳ ಆಯ್ಕೆಯಲ್ಲ.ಇದು ನಮ್ಮ ಶಾಲಾ ವ್ಯವಸ್ಥೆಯ ಮುಖ್ಯವಾಹಿನಿಯ ಶಿಕ್ಷಣದಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ಮಕ್ಕಳು ಮತ್ತು ಪೋಷಕರಿಗೆ ಸಹಾಯ ಮಾಡಲು ಸ್ಥಳೀಯ ಸಮುದಾಯದ ಸಹಯೋಗದೊಂದಿಗೆ ಮಾಡಿದ ಪ್ರಯತ್ನವಾಗಿದೆ. ಗ್ರಾಮ ಸಮುದಾಯದೊಂದಿಗಿನ ಶಿಕ್ಷಣದ ಬಗೆಗಿನ ಇಂತಹ ಸಂವಾದಗಳು ಮತ್ತು ಚರ್ಚೆಗಳು ಗ್ರಾಮದಲ್ಲಿ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸುತ್ತದೆ ಮತ್ತು ಈ ಪ್ರಯತ್ನಗಳನ್ನು ಬಲಪಡಿಸುತ್ತದೆ.

ನಿದೇಶ್ ಸೋನಿ ರವರು ಕಳೆದ 12 ವರ್ಷಗಳಿಂದ ಏಕಲವ್ಯ ಫೌಂಡೇಶನ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಗಣಿತಶಾಸ್ತ್ರವನ್ನು ಬೋಧಿಸುವ ಆಸಕ್ತಿಯನ್ನು ಹೊಂದಿದ್ದಾರೆ. ಅವರು ಸದ್ಯ ಏಕಲವ್ಯದ ಸಾತ್ಪುರ್ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರನ್ನು nideshsoni@gmail.comಇಲ್ಲಿ ಸಂಪರ್ಕಿಸಬಹುದು.